ಸ್ಫೂರ್ತಿಯ ಬಗ್ಗೆ ಮಾತಾಡಬೇಕೆಂದು ಕೇಳಿಕೊಂಡರು. ಅಲ್ಲಿರುವವರೆಲ್ಲರೂ ಶಿಕ್ಷಿತರಾಗಿದ್ದರಿಂದ, ಹಲವರು ಮಾಸ್ಟರ್ಸ್ ಹಾಗೂ ಡಾಕ್ಟರೇಟ್ ಪದವೀಧರರೂ ಇದ್ದುದರಿಂದ ಅಂಬೇಡ್ಕರ್ ಅವರ ವಿಚಾರವಾದ ಅವರನ್ನು ಪ್ರಭಾವಿಸಿದ್ದಾಗಿ ಹೇಳಿಕೊಂಡರು. ತಾವು ಶಾಸ್ತ್ರ, ಸಂಪ್ರದಾಯಗಳನ್ನು ಮೀರಿ ಸರಳವಾಗಿ ಮದುವೆಯಾದ ಬಗ್ಗೆ ಕೆಲವರು ಹೇಳಿಕೊಂಡರು. ಕ್ಯಾಲ್ಗರಿ ವಿಶ್ವವಿದ್ಯಾಲಯದಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೋ ಆಗಿರುವವರೊಬ್ಬರು ತಾನು ನಾಸ್ತಿಕ ಎಂದೂ, ಅಂಬೇಡ್ಕರ್ ಅಂತರ್ ಜಾತೀಯ, ಅಂತರ್ ಧರ್ಮೀಯ ಮದುವೆಗಳ ಮೂಲಕ, ಅಂತರ್ ಸಮುದಾಯಿಕ ಔತಣದ ಮೂಲಕ ಜಾತಿ ನಿರ್ಮೂಲನೆಗೆ ಕರೆಕೊಟ್ಟಿದ್ದರು ಎಂಬುದನ್ನು ಹೇಳಿ, ಆ ಕಾರಣಕ್ಕೆ ತಾನು ಚೈನಾದ ಹುಡುಗಿಯನ್ನು ಮದುವೆಯಾಗಿದ್ದಾಗಿ, ಆ ಹುಡುಗಿಯನ್ನು ತನ್ನಂತೆಯೇ ಬೌದ್ಧಮತೀಯರನ್ನಾಗಿಸಬಹುದಾಗಿತ್ತಾದರೂ, ಅವರು ಕ್ರೈಸ್ತಮತೀಯರಾಗಿಯೇ ಉಳಿಯಲು ಬೆಂಬಲಿಸಿದ್ದಾಗಿ ಹೇಳಿದರು. ಬೌದ್ಧಮತವೆಂದರೇ ನಾಸ್ತಿಕವಾದ್ದರಿಂದ, ಬೌದ್ಧಮತೀಯರು ತಮ್ಮನ್ನು ತಾವು ನಾಸ್ತಿಕರೆಂದು ಕರೆದುಕೊಂಡರೆ ಅವರಿಗೆ ಬುದ್ಧನ ಉಪದೇಶ ಅರ್ಥವಾಗಿಲ್ಲವೆಂದು ಅರ್ಥವೇ? ಬುದ್ಧನನ್ನು ಜನ ಭಗವಾನ್ ಮಾಡಿದಲ್ಲಿ ಬುದ್ಧ ತಾನೇ ಏನು ಮಾಡಲು ಸಾಧ್ಯ? ಅಂಬೇಡ್ಕರರ ನವಯಾನದ ಮೂಲ ಉದ್ದೇಶವೇ ಜಾತಿ ನಿರ್ಮೂಲನೆಗಾಗಿ ಹೋರಾಡುತ್ತ ಸಮಸಮಾಜ ನಿರ್ಮಾಣ ಮಾಡುವುದಾಗಿತ್ತು. ಆದರೆ, ಇಂದು ಬೌದ್ಧಮತೀಯರಾಗಿರುವ ದಲಿತರು ಅದನ್ನೇ ಒಂದು ಜಾತಿಯಾಗಿಸಿರುವುದರಿಂದ ವಿಮೋಚನಾ ಮಾರ್ಗವೆಲ್ಲಿ? ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ಹೆಚ್ಚಿನವರ ಮಾತುಗಳು ಬಹುತೇಕ ಭಾವನಾತ್ಮಕವಾಗಿಯೇ ನೆಲೆಯಿಂದಲೇ ಹೊರಟು ಅಲ್ಲಿಗೇ ನಿಂತವೇ ಹೊರತು, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಮಟ್ಟಕ್ಕೇರಲಿಲ್ಲ. ಈ ಕಾರಣಕ್ಕೆ ನಾನು ಯಾರಾದರೂ ತಮ್ಮನ್ನು ಅಂಬೇಡ್ಕರ್‌ವಾದಿ ಎಂದು ಕರೆದುಕೊಂಡರೆ ಗುಮಾನಿಯಿಂದ ನೋಡುತ್ತೇನೆ. ನನ್ನ ಸರದಿ ಬಂದಾಗ ಎಲ್ಲರಿಗೂ ಒಂದು ಪ್ರಶ್ನೆ ಕೇಳಿದೆ. ಇಲ್ಲಿ ನೆರೆದಿರುವವರೆಲ್ಲರೂ ತಾವು ಅಂಬೇಡ್ಕರ್‌ವಾದಿಗಳೆಂದು ಹೇಳಿಕೊಂಡಿದ್ದೀರಿ. ಅವರ ವಿಚಾರವಾದ ಪ್ರಭಾವಿಸಿದ್ದಾಗಿ ಹೇಳಿಕೊಂಡಿದ್ದೀರಿ. ನಿಮಗೆಲ್ಲ ನನ್ನದೊಂದು ಪ್ರಶ್ನೆಯಿದೆ. ಇದನ್ನು ಇಲ್ಲಿರುವವರೆಲ್ಲರು ಚರ್ಚಿಸಬೇಕೆಂದು ಕೇಳುತ್ತಿದ್ದೇನೆ. ನಿಮ್ಮ ಗ್ರಹಿಕೆಯಲ್ಲಿ ಅಂಬೇಡ್ಕರ್‌ವಾದಿ ಎಂದರೆ ಏನು?



ಹಾಗೆ ಕೇಳಲು ಕಾರಣ, ಅಂಬೇಡ್ಕರ್‌ವಾದ ಎಂದರೆ ಏನು ಎಂದು ನಾವು ಅಂದುಕೊಂಡಿದ್ದೇವೆಯೋ ಅದು ಯಾವುದೋ ಒಂದು ರಾತ್ರಿ ಬೋಧಿವೃಕ್ಷದ ಕೆಳಗೆ ಆದ ಜ್ಞಾನೋದಯವಾಗಿರಲಿಲ್ಲ. ಅದೊಂದು ನಿರಂತರವಾದ ಹುಡುಕಾಟವಾಗಿತ್ತು. ಅದರ ಹಿಂದೆ ಶಿಸ್ತುಬದ್ಧವಾದ ಅಧ್ಯಯನ, ಚಿಂತನೆ, ಹೋರಾಟ, ಬರಹಗಳಿದ್ದವು. ಅಂಬೇಡ್ಕರ್‌ವಾದಿಯಾಗಬೇಕಾದರೆ ಅವನ್ನೆಲ್ಲ ಮೈಗೂಡಿಸಿಕೊಳ್ಳಬೇಕಲ್ಲವೇ? ಅದು ಎಷ್ಟು ದೊಡ್ಡ ನೈತಿಕ ಜವಾಬ್ದಾರಿ. ಕೇವಲ ಅವರ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೋ, ನವಬೌದ್ಧರಾದ ಮಾತ್ರಕ್ಕೋ ಯಾರಾದರೂ ಅಂಬೇಡ್ಕರ್‌ವಾದಿಯಾಗುವುದಾಗಿದ್ದರೆ, ಇಂದು ಕೋಟ್ಯಂತರವಲ್ಲದಿದ್ದರೂ ಲಕ್ಷಾಂತರ ಮಂದಿ ಅಂಬೇಡ್ಕರ್‌ವಾದಿಗಳು ಇರಬೇಕಿತ್ತಲ್ಲವೇ?

●